

# ಪೈಠಣಿ ಸೀರೆ ಮಿಂಚುವ ನೀರೆ

ಸೀರೆಗಳಲ್ಲಿ ಎಷ್ಟೇ ವೈವಿಧ್ಯವಿದ್ದರೂ ಒಂದಕ್ಕಿಂತ ಒಂದು ಚಂದ, ವಿಭಿನ್ನ. ರೇಷ್ಮೆ ಸೀರೆ ರಾಣಿಯಂತೆ ಮಿಂಚುತ್ತಿದ್ದರೂ ಪೈಠಣಿ ಸೀರೆ ಎಲ್ಲ ಸೀರೆಗಳೊಂದಿಗೆ ಪೈಪೋಟಿ ನಡೆಸುತ್ತಿದೆ. ಈ ಸೀರೆಯಲ್ಲಿ ನೀರೆಯನ್ನು ನೋಡುವುದಂತೂ ಚಂದಕ್ಕಿಂತ ಚಂದ!

■ ಆಶಾ ಎಸ್‌. ಕುಲಕರ್ಣಿ

ಪೈಠಣಿ ಸೀರೆ ಉಡಲು ಚಂದ, ನೋಡಲು ಅಂದ, ಹಗುರ, ಆರಾಮದಾಯಕ. ತಿಜೋರಿಯಲ್ಲಿ ಎಷ್ಟೇ ಸೀರೆಗಳಿದ್ದರೂ ಪೈಠಣಿ ಸೀರೆಗೆ ಮಹಿಳೆಯರು ಜಾಗ ಹೊಂದಿಸಿಕೊಳ್ಳುತ್ತಾರೆ. ಸೀರೆ ಎಂದರೆ ನೀರೆಯರ ಮೊಗ ಮೊರದಗಲ ಆಗುವುದು ಇದೇ ಕಾರಣಕ್ಕೆ. ಹೀಗಾಗಿ ಸೀರೆಗೂ ನೀರೆಗೂ ಅವಿನಾಭಾವ ಸಂಬಂಧ.

ಕಾಲಕ್ಕೆ ತಕ್ಕಂತೆ ಎಷ್ಟೇ ಫ್ಯಾಷನಬಲ್ ಉಡುಗೆಗಳು ಮಾರುಕಟ್ಟೆಗೆ ಬಂದರೂ ಸೀರೆ ತನ್ನ ಎಂದಿನ ಸ್ಥಾನಮಾನವನ್ನು ಬಿಟ್ಟುಕೊಡಲಿಲ್ಲ. ಬದಲಿಗೆ ಫ್ಯಾಷನ್‌ಗೆ ತಕ್ಕಂತೆ ನಿತ್ಯ ನೂತನವಾಗಿ ಕಂಗೊಳಿಸುತ್ತಿದೆ. ಎಷ್ಟೇ ಆಧುನಿಕ ಡ್ರೆಸ್ ತೊಡುವ ಮಹಿಳೆಯರು ಕೂಡ ಒಂದಿಲ್ಲೊಂದು ರೇಷ್ಮೆ ಸೀರೆಯನ್ನಾದರೂ ತಮ್ಮ ವಾರ್ಡ್‌ರೋಬಿನಲ್ಲಿಡುತ್ತಾರೆ ಎಂದರೆ ನಂಬಲೇಬೇಕು. ಸೀರೆಗಳಲ್ಲಿನ ವೈವಿಧ್ಯಮಯ, ಬೆರಗು ಮೂಡಿಸುವಂತಹ ವಿನ್ಯಾಸ, ಅಂಚುಗಳಲ್ಲಿ ವಿಭಿನ್ನತೆ, ಸೆರಗಿನಲ್ಲಿ ಕಲಾತ್ಮಕ ನೇಯ್ಗೆ... ಹೀಗೆ ಸೀರೆಯ ಅಂದಕ್ಕೆ ಮನಸೋಲದವರೇ ಇಲ್ಲ. ವಯಸ್ಸಿನ ಭೇದಭಾವವಿಲ್ಲ, ಹಳೆ ತಲೆಮಾರು, ಹೊಸ ತಲೆಮಾರಿನ ಎಲ್ಲ ಮಹಿಳೆಯರ ಅಚ್ಚುಮೆಚ್ಚಿನ ಸೀರೆಗಳು ಸಂಪ್ರದಾಯಕ್ಕೂ ಸೈ ಫ್ಯಾಷನ್‌ಗೂ ಸೈ. ಇವು ಭಾರತದ ನಾನಾ ಪ್ರಾಂತಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ.

ವಸ್ತ್ರವಿನ್ಯಾಸಕಾರರು ಫ್ಯಾಷನ್‌ಪ್ರಿಯರಿಗೋಸ್ಕರ ಹೊಸ ಹೊಸ ಪ್ರಯೋಗ ಮಾಡಲು ಈ ತರಹೇವಾರಿ ಸೀರೆಗಳನ್ನೇ ಆಯ್ದುಕೊಳ್ಳುತ್ತಿದ್ದಾರೆ. ಇನ್ನು ಎಲ್ಲ ವಯೋಮಾನದ ಮಹಿಳೆಯರು ಶುಭ ಸಮಾರಂಭ ಅಥವಾ ಯಾವುದೇ ಕಾರ್ಯಕ್ರಮಕ್ಕೆ ಹೋಗಬೇಕೆಂದರೆ, ಅವರ ಮೊದಲ ಆಯ್ಕೆ ಟ್ರೆಡಿಷನಲ್ ಲುಕ್ ನೀಡುವ ಸೀರೆಗಳು.

ಸಾಂಪ್ರದಾಯಿಕ ಸೀರೆಗಳು ಅತ್ಯಂತ ಪ್ರಚಲಿತವಾಗಿದ್ದು ದೇಶ ವಿದೇಶಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ. ಸೆಲೆಬ್ರಿಟಿಗಳು ಸಹ ಪೈಠಣಿ ಸೀರೆಗಳತ್ತ ಒಲವು ಮೂಡಿಸಿದ್ದಾರೆ. ಕೆಲ ದಿನಗಳ ಹಿಂದೆ ಇನ್‌ಸ್ಟಾದಲ್ಲಿ ಬಾಲಿವುಡ್ ನಟಿ ಅಲಿಯಾ ಧರಿಸಿದ್ದ ಎರಡು ನೂರು ವರ್ಷಗಳ ಹಳೆಯ ಪೈಠಣಿ ಸೀರೆ ನೋಡ ನೋಡುತ್ತಿದ್ದಂತೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಯಿತು. ಹಾಗೇ ಮಿಲಿಯನ್‌ಗಟ್ಟಲೆ ಲೈಕ್ ಕೂಡ ಬಂತು.